# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್.ಸಿ. 257/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಪವನ್ ಕುಮಾರ್ | | ಪ್ರಮಾಣ ಮಾಡಿಸಿದ ದಿನಾಂಕಃ |
| **ತಂದೆ/ಗಂಡನ ಹೆಸರು** | ಃ ಶ್ರೀ ಬಸವರಾಜು | | **12.08.2024** |
| **ವಯಸ್ಸು** | ಃ **31** ವರ್ಷ | | |
| **ವೃತ್ತಿ** | ಃ ಸಿವಿಲ್ ಕನ್ಸ್ ಟ್ರಕ್ಷನ್ | **ಪ್ರಾ.ಸಾ.** | ಃ **02** |
| **ವಾಸಸ್ಥಳ** | ಃ ರಾಮಾನುಜ ರೋಡ್, ಮೈಸೂರು | **ಚಾ.ಸಾ.** | ಃ **02** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಕೋರ್ಟ್ ಮುಂದೆ ಇರುವ ಆರೋಪಿತರನ್ನು ಈ ಮೊದಲು ಕೆಲವೊಮ್ಮೆ ನೋಡಿದ್ದೇನೆ ಮತ್ತು ಅಲ್ಪ ಸ್ವಲ್ಪ ಅವರ ಪರಿಚಯ ಇದೆ. ಚಾ.ಸಾ-1, 3 ಮತ್ತು ನಾನು ಸ್ನೇಹಿತರಿರುತ್ತೇವೆ. ದಿಃ*04.10.2020* ರಂದು ನಾನು ಮತ್ತು ಚಾ.ಸಾ*-3* ರಮೇಶ ರಾತ್ರಿ *8.30-9* ಗಂಟೆ ವೇಳೆಯಲ್ಲಿ ಚಾಸಾ*-1* ರವರ ಮನಗೆ ಹೋಗಿದ್ದೆವು. ಆ ದಿನ ರಾತ್ರಿ *11.45-12* ಗಂಟೆ ವೇಳೆಯಲ್ಲಿ ಎಂ.ಜಿ. ರಸ್ತೆಯಲ್ಲಿನ ಟೀ ಅಂಗಡಿಗೆ ಟೀ ಕುಡಿಯಲು ಹೋಗಿದ್ದೆವು. ಟೀ ಕುಡಿದು *12.30* ರ ಸಮಯದಲ್ಲಿ ವಾಪಸ್ಸು ಬರುತ್ತಿರುವಾಗ ಜೆ.ಎಸ್.ಎಸ್ ಆಸ್ಪತ್ರೆ ಮುಂಭಾಗದಲ್ಲಿರುವ ರೋಡ್ ಹಂಪ್ಸ್ ಬಳಿ ಬಂದಾಗ *1* ನೇ ಆರೋಪಿತ ಅಂಬರೀಶ್ ಇವರು ಕಾರಿಗೆ ಕೈ ಅಡ್ಡ ಹಾಕಿದ್ದರು. ಆಗ ನಾವು ಏನೋ ಆಸ್ಪತ್ರೆ ತುರ್ತು ಕಾರ್ಯ ಇರಬಹುದು ಎಂದು ಕಾರನ್ನು ನಿಲ್ಲಿಸಿದಾಗ ನನ್ನ ಸ್ನೇಹಿತ ರಮೇಶನಿಗೆ *1* ನೇ ಆರೋಪಿತ ಗಾಡಿ ಏಕೆ ನಿಲ್ಲಿಸಿದೆ ಎಂದು

ಅಂಬರೀಶ ಕೈಯಿಂದ ಹೊಡೆದಿದ್ದ ಆಗ ನಾನು ಮತ್ತು ನವೀನ್ ಕಾರಿನಿಂದ ಕೆಳಗೆ ಇಳಿದು ಯಾಕೆ ಆ ರೀತಿ ಹೊಡೆಯುತ್ತೀಯಾ ಎಂದು 1ನೇ ಆರೋಪಿತನನ್ನು ಕೇಳಿದಾಗ 1 ಮತ್ತು 2ನೇ ಆರೋಪಿತರು ನವೀನ್ ನನ್ನು ಸಹ ಹೊಡೆದಿದ್ದರು. ಆ ಕಾಲಕ್ಕೆ 1ನೇ ಆರೋಪಿತನು ರೇಜರ್ ನಿಂದ ನವೀನ್ ನ ಮುಖ ಮತ್ತು ಕೈಗೆ ಹೊಡೆದಿದ್ದ. ಆ ಕಾಲಕ್ಕೆ ಜಗಳ ಬಿಡಿಸುವಾಗ ನನ್ನ ಕೈಗೆ ಏಟಾಗಿತ್ತು. ಆ ಸ್ಥಳದಲ್ಲಿದ್ದ ಆಟೋ ಚಾಲಕರು ಜಗಳ ಬಿಡಿಸಿದ್ದರು. ಆ ಘಟನೆ ಬಳಿಕ ನವೀನ್ ನನ್ನು ಸೀತಾರಂಗ (ವಾತ್ಸಲ್ಯ) ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆವು ಅಲ್ಲಿ ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಪೋಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇವು. ನಂತರ ಮರುದಿನ ಬೆಳಗ್ಗೆ ಭಾನವಿ ಆಸ್ಪತ್ರೆಗೆ ನವೀನ್ ಕುಮಾರ್ ಇವರನ್ನು ಸೇರಿಸಿದ್ದೆವು. ಈ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ. ಈಗ ನಾನು ನೋಡುತ್ತಿರುವ ಎಂ.ಒ 1 ಎಂದು ಗುರುತಿಸಿರುವ ರೇಜರ್ ಆ ಘಟನೆ ಕಾಲಕ್ಕೆ 1ನೇ ಆರೋಪಿತ ಹಲ್ಲೆ ಮಾಡಲು ಉಪಯೋಗಿಸಿದ್ದ ರೇಜರ್ ಇರುತ್ತದೆ.

ಪಾಟೀ ಸವಾಲು ಃ ಆರೋಪಿ ಪರ ವಕೀಲರು ಸಮಯ ಕೋರಿದ್ದು ಸೂಕ್ತ ಕಾರಣ ಹೇಳದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
*ಮೈಸೂರು*